**ಕರ್ನಾಟಕ ಸರ್ಕಾರ**
ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-560 001.
E-mail: karnregs@gmail.com

ಸಂ: ಗ್ರಾಅಪ 122 ಉಖಾಯೊ 2008 Date: 17.12.2009

ರವರಿಗೆ,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ರಾಜ್ಯದ ಎಲ್ಲಾ ಜಿ.ಪಂ.ಗಳು
(ತುಮಕೂರು, ಕೋಲಾರ, ದಾವಣಗೆರೆ, ಗುಲಬರ್ಗಾ,ಚಿಕ್ಕಬಳ್ಳಾಪುರ ಮತ್ತು ಚಿತ್ರದುರ್ಗ ಜಿ.ಪಂ.ಗಳನ್ನು ಹೊರತುಪಡಿಸಿ)

ಮಾನ್ಯರೇ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನದಲ್ಲಿ NMR ಗಳನ್ನು ದಾಖಲಿಸಿ ಹಣ ಪಾವತಿಸಲು ಅನುಸರಿಸಬೇಕಾದ ಕ್ರಮಗಳ ಕುರಿತು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಅನುಷ್ಠಾನ ಕಾರ್ಯ ಪ್ರಗತಿಯಲ್ಲಿದ್ದು ಹೆಚ್ಚಿನ ಪಾರದರ್ಶಕತೆಯೊಂದಿಗೆ ಯೋಜನೆ ಅನುಷ್ಠಾನಗೊಳಿಸುವುದು ಪ್ರಮುಖವಾಗಿದೆ. ಯೋಜನೆಯಡಿ ಕೆಲಸ ನಿರ್ವಹಿಸುವ ಪ್ರತಿಯೊಬ್ಬ ನೊಂದಾಯಿತ ಕಾರ್ಮಿಕರಿಗೂ ನಿಗಧಿತ ಅವಧಿಯೊಳಗಾಗಿ ಹಣ ಪಾವತಿಸುವದನ್ನು ಖಚಿತಪಡಿಸಿಕೊಳ್ಳಬೇಕಾಗಿರುತ್ತದೆ ಮತ್ತು ಯೋಜನೆ ಅನುಷ್ಠಾನದಲ್ಲಿ NMR ಗಳನ್ನು ದಾಖಲಿಸಿ ಹಣ ಪಾವತಿಸುವ ಪ್ರಕ್ರಿಯೆಯಲ್ಲಿ ಹೆಚ್ಚಿನ ನಿಗವಹಿಸಬೇಕಾಗಿದೆ. ಆದುದರಿಂದ, ಈ ನಿಟ್ಟನಲ್ಲಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಕೆಳಕಂಡ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ನಿಗಧಿತ ಅವಧಿಯೊಳಗಾಗಿ ಹಣ ಪಾವತಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

- ಯಾವುದೇ ಇಲಾಖೆಗೆ ಸಂಬಂಧಿಸಿದ ಕಾಮಗಾರಿಯನ್ನು ಅನುಷ್ಠಾನಗೊಳಿಸಬೇಕಾದಲ್ಲಿ ಸದರಿ ಇಲಾಖೆಯ ಅನುಷ್ಠಾನ ಅಧಿಕಾರಿಗೆ ಗ್ರಾ.ಪಂ.ಯ ಕಾರ್ಯದರ್ಶಿಯವರು ಅಧಿಕೃತ NMR ನ್ನು ಕಾಮಗಾರಿ ಮತ್ತು ಕೆಲಸಗಾರರ ಮಾಹಿತಿಯೊಂದಿಗೆ ವಿತರಿಸತಕ್ಕದ್ದು. (ಅಧಿಕೃತ NMR ಅಂದರೆ ತಾ.ಪಂ. ಕಾರ್ಯಾಲಯದಿಂದ ಪಡೆದಿರುವ NMR ಅಥವಾ MIS ಮೂಲಕ ಪಡೆದ NMR). ಈ

ಹಂತದಲ್ಲಿ ಯಾವುದೇ ತಪ್ಪು ದಾಖಲಾತಿಗಳನ್ನು ಒದಗಿಸಿ ಹಣ ದುರುಪಯೋಗವಾಗಿರುವುದು ಕಂಡುಬಂದಲ್ಲಿ ಗ್ರಾ.ಪಂ. ಕಾರ್ಯದರ್ಶಿಯವರೇ ನೇರ ಹೊಣೆಗಾರರಾಗಿರುತ್ತಾರೆ.

- NMR ಪಡೆದ ಅನುಷ್ಠಾನ ಅಧಿಕಾರಿ ಸದರಿ NMR ನ್ನೇ ಕಾಮಗಾರಿ ಅನುಷ್ಠಾನದಲ್ಲಿ ಬಳಸತಕ್ಕದ್ದು ಹಾಗೂ ಅಗತ್ಯ ಮಾಹಿತಿಯನ್ನು ಭರ್ತಿ ಮಾಡಿದ ನಂತರ ಸೂಕ್ತ ದೃಡೀಕರಣದೊಂದಿಗೆ ಗ್ರಾ.ಪಂ.ಗೆ ಹಿಂತಿರುಗಿಸತಕ್ಕದ್ದು. ಈ ಹಂತದಲ್ಲಿ ಯಾವುದೇ ತಪ್ಪು ಮಾಹಿತಿ ನೀಡಿ ಹಣ ದುರುಪಯೋಗವಾಗಿರುವುದು ಕಂಡುಬಂದಲ್ಲಿ ಆಯಾ ಇಲಾಖಾ ಅನುಷ್ಠಾನ ಅಧಿಕಾರಿಗಳೇ ನೇರ ಹೊಣೆಗಾರರಾಗಿರುತ್ತಾರೆ.
- ಗ್ರಾ.ಪಂ.ಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರು ಅನುಷ್ಠಾನ ಅಧಿಕಾರಿಗಳಿಂದ ಹಿಂಪಡೆದ NMR ಗಳನ್ನು ಪರಿಶೀಲಿಸಿ ಪೂರ್ಣ ಮಾಹಿತಿ ಸರಿಯಿರುವುದಾಗಿ ದೃಡಪಡಿಸಿಕೊಂಡ ಮೇಲೆ ಸೂಕ್ತ ದೃಡೀಕರಣದೊಂದಿಗೆ ತಾ.ಪಂ. ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಹಣ ಪಾವತಿಸಲು ಅಧಿಕೃತ ಮಂಜೂರಾತಿಗಾಗಿ ಸಲ್ಲಿಸತಕ್ಕದ್ದು. ಈ ಹಂತದಲ್ಲಿ ಯಾವುದೇ ತಪ್ಪು ದೃಡೀಕರಣ ನೀಡಿ ಹಣ ದುರುಪಯೋಗವಾಗಿರುವುದು ಕಂಡುಬಂದಲ್ಲಿ ಗ್ರಾ.ಪಂ. ಕಾರ್ಯದರ್ಶಿ ಹಾಗೂ ಅಧ್ಯಕ್ಷರೇ ನೇರ ಹೊಣೆಗಾರರಾಗಿರುತ್ತಾರೆ.
- ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಯವರು ಸದರಿ NMR ಗಳನ್ನು ತಮ್ಮ ಕಛೇರಿಯಿಂದ ವಿತರಿಸಿರುವ ಬಗ್ಗೆ ಮತ್ತು NMR ನಲ್ಲಿ ಭರ್ತಿಮಾಡಬೇಕಾದ ಎಲ್ಲಾ ಮಾಹಿತಿ ಮತ್ತು ದೃಡೀಕರಣ ಇರುವುದನ್ನು ಖಚಿತಪಡಿಸಿಕೊಂಡು MIS ನಲ್ಲಿ ದಾಖಲಿಸಲು ಅನುಮತಿ ನೀಡತಕ್ಕದ್ದು. ಅನುಮತಿ ನೀಡಿದ ಕುರಿತು NMR ನಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಕಾರ್ಯನಿರ್ವಾಹಕ ಅಧಿಕಾರಿ ಗುರುತಿಸುವ ತಾ.ಪಂ.ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಯಾವುದೇ ಇತರೆ ಅಧಿಕಾರಿ ದಾಖಲಿಸಿ ಸಹಿಮಾಡಬೇಕು. ಈ ಹಂತದಲ್ಲಿ ಯಾವುದೇ ಮಾಹಿತಿಯನ್ನು ಪರಿಶೀಲಿಸದೇ MISನಲ್ಲಿ ಮಾಹಿತಿ ದಾಖಲಿಸಿ ಹಣ ಪಾವತಿಸಲು ಆದೇಶ ನೀಡಿ ಹಣ ದುರುಪಯೋಗವಾಗಿರುವುದು ಕಂಡುಬಂದಲ್ಲಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಯವರೇ ನೇರ ಹೊಣೆಗಾರರಾಗಿರುತ್ತಾರೆ.
- ಸದರಿ NMR ಗಳ ಮಾಹಿತಿಯನ್ನು ತಾ.ಪಂ.ಕಾರ್ಯಾಲಯದಲ್ಲೇ MIS ನಲ್ಲಿ ದಾಖಲಿಸಲು ಕಂಪ್ಯೂಟರ್ ಆಪರೇಟರ್ಸಗಳಿಗೆ ವಹಿಯಲ್ಲಿ ದಾಖಲಿಸಿ ನೀಡತಕ್ಕದ್ದು ಮತ್ತು NMR ದಾಖಲಿಸುವ ಕಂಪ್ಯೂಟರ್ ಆಪರೇಟರ್ಸಗಳ ವಿವರಗಳನ್ನು ವಹಿಯಲ್ಲಿ ನಮೂದಿಸುವುದು.MIS ನಲ್ಲಿ ತಪ್ಪು ಮಾಹಿತಿ ದಾಖಲಿಸಿ ಹಣ ದುರುಪಯೋಗವಾಗಿರುವುದು ಕಂಡುಬಂದಲ್ಲಿ ಸದರಿ ಕಂಪ್ಯೂಟರ್ ಆಪರೇಟರವರೇ ನೇರ ಹೊಣೆಗಾರರಾಗಿರುತ್ತಾರೆ.
- NMR ಮಾಹಿತಿಯನ್ನು MIS ನಲ್ಲಿ ದಾಖಲಿಸಿದ ನಂತರ ಹಣ ಪಾವತಿ ಆದೇಶವನ್ನು (Pay Order) ಮುದ್ರಿಸಿ ವಹಿಯಲ್ಲಿ ದಾಖಲಿಸಿ ಹಣ ಪಾವತಿಗಾಗಿ ಸಂಬಂಧಪಟ್ಟ ಗ್ರಾ.ಪಂ.ಗೆ ಕಳುಹಿಸತಕ್ಕದ್ದು. ಈ ಹಂತದಲ್ಲಿ ಯಾವುದೇ ಮಾಹಿತಿಯನ್ನು ಪರಿಶೀಲಿಸದೇ ಹಣ ಪಾವತಿಸಲು ಆದೇಶ ನೀಡಿ ಹಣ ದುರುಪಯೋಗವಾಗಿರುವುದು ಕಂಡುಬಂದಲ್ಲಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕಂಪ್ಯೂಟರ್ ಆಪರೇಟರ್ ಗಳೆ ನೇರ ಹೊಣೆಗಾರರಾಗಿರುತ್ತಾರೆ

- ಹಣ ಪಾವತಿ ಆದೇಶದ ಮೇಲೆ ಗ್ರಾ.ಪಂ. ಕಾರ್ಯದರ್ಶಿ ಹಾಗೂ ಅಧ್ಯಕ್ಷರು ಹಣ ಪಾವತಿಸಲು ಕ್ರಮವಹಿಸುವುದು.

ಮೇಲೆ ತಿಳಿಸಿದಂತೆ ಸೂಕ್ತ ಕ್ರಮವಹಿಸಲು ಅನುವಾಗುವಂತೆ ಆಯಾ ತಾಲ್ಲೂಕುಗಳಿಗೆ ಸಂಬಂಧಪಟ್ಟ ಎಲ್ಲಾ ಗ್ರಾ.ಪಂ.ಗಳ MIS PASSWORD ಗಳನ್ನು ಸುರಕ್ಷಿತವಾಗಿ ಇಟ್ಟುಕೊಂಡು ಕಾರ್ಯನಿರ್ವಹಿಸುವ ಜವಾಬ್ದಾರಿ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ತಾಲ್ಲೂಕು MIS ಕೋ ಆರ್ಡಿನೇಟರ್ ಗಳದಾಗಿದೆ.ಸದರಿಯವರು ಅನಧಿಕೃತವಾಗಿ ಮಾಹಿತಿಯನ್ನು MIS ನಲ್ಲಿ ಭರ್ತಿಮಾಡುವುದನ್ನು ತಡೆಯಲು ನಿಯಮಿತವಾಗಿ PASSWORD ಗಳನ್ನು ಬದಲಾಯಿಸಲು ಕ್ರಮವಹಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,
-ಸಹಿ-
ನಿರ್ದೇಶಕರು
ರಾ.ಗ್ರಾ.ಉ.ಖಾ.ಯೋ.ನಿರ್ದೇಶನಾಲಯ
ಗ್ರಾ.ಅ. ಮತ್ತು ಪಂ.ರಾ.ಇಲಾಖೆ